# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.568-2017** **ಪಿ . ಡಬ್ಲುಃ 2**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಎಲ್.ರಾಘವೇಂದ್ರ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 07-10-2023. |

**<u>ಪಾಟೀ ಸವಾಲುಃ ಶ್ರೀ ಎಸ್.ಯು ವಕೀಲರಿಂದಃ</u>**

ನನಗೆ ಪ್ರತಿವಾದಿಗಳು ಗೊತ್ತು. 1 ನೇ ಪ್ರತಿವಾದಿ ನನ್ನನ್ನು ದಿ.24-11-2014 ರಂದು ಸಾಕ್ಷಿಯಾಗಿ ಬರುವಂತೆ ಕರೆದಿರುತ್ತಾರೆ. 1 ನೇ ಪ್ರತಿವಾದಿ ನಾನು ವಾದಿಯಿಂದ ಸಾಲ ಪಡೆಯುತ್ತಿರುವುದರಿಂದ ಸಾಕ್ಷಿಯಾಗಿ ಬರುವಂತೆ ಕರೆದಿರುತ್ತಾರೆ. ನಾನು ಚಾಮಲಾಪುರ ಬೀದಿಯಲ್ಲಿ ಇರುವ ಹರ್ಷ ಟ್ರೇಡರ್ಸ್ ಅಂಗಡಿಯ ಬಳಿ ಹೋಗಿರುತ್ತೇನೆ. ನಾನು ಹರ್ಷ ಟ್ರೇಡರ್ಸ್ ಅಂಗಡಿಯ ಬಳಿ ನಿಪಿ-1 ಮತ್ತು 2 ಕ್ಕೆ ನನ್ನ ಸಹಿ ಮಾಡಿದ್ದು, ಆ ಸಮಯ ಪತ್ರ ಬರಹಗಾರರಾದ ಲೋಕೇಶ್ ರವರು ಸಹ ಅಲ್ಲೇ ಇದ್ದರು. ಆ ಸಮಯ ನಾನು ವಾದಿ, ಪ್ರತಿವಾದಿಗಳು ಮತ್ತು ಲೋಕೇಶ್ ರವರು ಇದ್ದೆವು. ನನ್ನೊಂದಿಗೆ ಶಿವರಾಜು ರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಹಣವನ್ನು ಪ್ರತಿವಾದಿಗಳು ಇಬ್ಬರು ಪಡೆದುಕೊಂಡಿರುತ್ತಾರೆ. ನನ್ನ ಸಮಕ್ಷಮ ಯಾವುದೇ ಹಣಕಾಸಿನ ವ್ಯವಹಾರ ನಡೆಯದೇ ಇದ್ದರೂ ಸಹ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಹೇಳುವಂತೆ ದಿ.24-11-2014 ರಂದು 2 ನೇ ಪ್ರತಿವಾದಿ ವಾದಿಯಿಂದ ಯಾವುದೇ ಹಣ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.

(1 ನೇ ಪ್ರತಿವಾದಿ ವಾದ ಪತ್ರಕ್ಕೆ ತನ್ನ ಲಿಖಿತ ತಕರಾರು ಸಲ್ಲಿಸದೇ ಇರುವ ಕಾರಣ ಪಾಟೀ ಸವಾಲು ಸಲ್ಲ ಎಂದು ತೆಗೆದುಕೊಳ್ಳಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**